ಶ್ರೀ ವಿ. ಮುನಿಯಪ್ಪ.— ೧೨೩ ಜನ ಗೋಬರ್ ಗ್ಯಾಸ್ ಯಂತ್ರಗಳ ಸೂಪರ್‌ವೈಸರ್‌ಗಳ ಹುದ್ದೆಯನ್ನು ಖಾಯಂ ಗೊಳಿಸುವ ಬಗ್ಗೆ ಸರ್ಕಾರದ ನಿಲುವು ಏನು?

ಶ್ರೀ ಅಬ್ದುಲ್ ನಜೀರ್‌ಸಾಬ್.— ಮಾನ್ಯ ಸದಸ್ಯರ ತಲೆಯಲ್ಲಿ ಎರಡು ಸಮಸ್ಯೆಗಳಿವೆ. ಖಾದಿ ಮಂಡಳಿಗೂ ನನಗೂ ಯಾವುದೇ ರೀತಿಯ ಸಂಬಂಧವಿಲ್ಲ. ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ನಾನು ಉತ್ತರ ಹೇಳಬಲ್ಲೆ.

ಅರಸೀಕೆರೆ ಪಟ್ಟಣದಲ್ಲಿ ಹೆಣ್ಣುಮಕ್ಕಳ ಪ್ರೌಢ ಶಾಲಾ ಕಟ್ಟಡ ಕಟ್ಟಿಸುವ ಬಗ್ಗೆ

೨೨೬. ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).—ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಅರಸೀಕೆರೆ ಪಟ್ಟಣದಲ್ಲಿ ಸರ್ಕಾರಿ ಹೆಣ್ಣು ಮಕ್ಕಳ ಪ್ರೌಢಶಾಲೆ ಕಟ್ಟಡವನ್ನು ಪ್ರಾರಂಭಿಸುವುದಕ್ಕೆ ಜಮೀನು ಯಾವ ಇಲಾಖೆಯವರು ಕೊಟ್ಟಿರುತ್ತಾರೆ ;

(ಆ) ಹಾಗಿದ್ದಲ್ಲಿ ತ್ವರಿತವಾಗಿ ಕಟ್ಟಡ ಪ್ರಾರಂಭಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಯಾವ ಇಲಾಖೆಯವರು ಜಮೀನು ಕೊಟ್ಟಿರುವುದಿಲ್ಲ ಈಗಿನ ಶಿಥಿಲಗೊಂಡ ಪ್ರೌಢ ಶಾಲಾ ಕಟ್ಟಡವನ್ನು ಕೆಡವಿ ಅದೇ ಸ್ಥಳದಲ್ಲಿ ಕಟ್ಟಡ ನಿರ್ಮಿಸುವ ಪ್ರಸ್ತಾವನೆ ಇರುವುದರಿಂದ ಹೊಸ ನಿವೇಶನವನ್ನು ಇತರ ಇಲಾಖೆಯವರಿಂದ ಪಡೆಯುವ ಅಗತ್ಯವಿಲ್ಲ.

(ಆ) ಶಿಕ್ಷಣ ಇಲಾಖೆಗೆ ನೀಡುತ್ತಿರುವ ಹಣದಲ್ಲಿ ಈ ಸಧ್ಯಕ್ಕೆ ಸಾಧ್ಯವಾಗಲಾರದು.

ಶ್ರೀ ಜಿ ಎಸ್. ಬಸವರಾಜ್.—ಅರಸೀಕೆರೆಯಲ್ಲಿ ಪ್ರೌಢಶಾಲೆ ನಡೆಯತಕ್ಕದ್ದು ಶಿಥಿಲವಾದ ಕಟ್ಟಡದಲ್ಲಿ. ಸರ್ಕಾರದವರು ಕಟ್ಟಡ ಕಟ್ಟಲು ಹಣ ಇಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದಾರೆ. ಒಂದು ಸಾವಿರ ವಿದ್ಯಾರ್ಥಿಗಳು ಓದತಕ್ಕ ಕಟ್ಟಡ ಕುಸಿದು ಬಿದ್ದರೆ ಸರ್ಕಾರ ಏನು ಮಾಡುತ್ತದೆ ? ಅದನ್ನು ದಯಮಾಡಿ ತಿಳಿಸಬೇಕು

ಶ್ರೀ ಬಿ. ರಾಚಯ್ಯ.—ಹಿಂದೆ ತಾಲ್ಲೂಕು ಬೋರ್ಡ್‌ನವರು ಪ್ರೌಢಶಾಲೆಯನ್ನು ನಡೆಸುತ್ತಿದ್ದಂತಹ ಕಟ್ಟಡ ಅದು. ಹಿಂದೆ ಅದೇ ಕಟ್ಟಡದಲ್ಲಿ ಶಾಲೆಯನ್ನು ನಡೆಸಿಕೊಂಡು ಬಂದಿದ್ದಾರೆ. ಈಗ ಆ ಶಾಲೆ ಮತ್ತೆ ಕಟ್ಟಡವನ್ನು ಸರ್ಕಾರದ ವಶಕ್ಕೆ ಕೊಟ್ಟಿದ್ದಾರೆ. ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡ ತಕ್ಷಣ ಏನು ಮಾಡುವುದಕ್ಕೆ ಆಗುತ್ತದೆ. ಅರಸೀಕೆರೆಯಲ್ಲಿ ಶ್ರೀಮಂತರು ಜಾಸ್ತಿ ಇದ್ದಾರೆ. ಆದ್ದರಿಂದ ದಯಮಾಡಿ ಪಂಚಿಗೆ ಸಂಗ್ರಹಿಸಿದರೆ ಒಳ್ಳೆಯದು. ತಾಲ್ಲೂಕು ಬೋರ್ಡ್‌ನವರು ೭.೫ ಲಕ್ಷ ರೂಪಾಯಿಯ ಕಟ್ಟಡದ ಅಂದಾಜನ್ನು ತಯಾರುಮಾಡಿ ಕಟ್ಟಡ ಕಟ್ಟಿಸತಕ್ಕ ಯೋಚನೆ ಮಾಡಿ, ನಂತರ ಅಕ್ಕಪಕ್ಕದ ಊರಿನವರಿಗೆ ಏನೋ ವ್ಯತ್ಯಾಸ ಬಂದು ಕಟ್ಟಡ ಕಟ್ಟಿಸದೇ ಸರ್ಕಾರದ ವಶಕ್ಕೆ ಶಾಲೆಯನ್ನು ವಹಿಸಿಕೊಟ್ಟಿದ್ದಾರೆ, ಆದ್ದರಿಂದ ದಾನಿಗಳಿಂದ ಪಂಚಿಗೆ ರೂಪದಲ್ಲಿ ಹಣವನ್ನು ಸಂಗ್ರಹಿಸಿ, ಸರ್ಕಾರ ಕೂಡ ವಂತಿಗೆ ಕೊಟ್ಟು ಬೇಗ ಕೆಲಸ ಶುರುಮಾಡುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಜಿ. ಎಸ್. ಬಸವರಾಜ್.—ಮಾನ್ಯ ಮಂತ್ರಿಗಳು ಕಟ್ಟಡ ಶಿಥಿಲವಾಗಿರುವುದರ ಬಗ್ಗೆ ಹೇಳಬೇಕು.

ಉಪಾಧ್ಯಕ್ಷರು.—ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ; ಎಷ್ಟು ದಿವಸಗಳಲ್ಲಿ ಕಟ್ಟಡ ಕಟ್ಟುತ್ತೀರಿ ಎಂದು ಪ್ರಶ್ನೆ ಕೇಳಿ.

ಶ್ರೀ ಜಿ. ಎಸ್. ಬಸವರಾಜ್.—ಸರ್ಕಾರದವರು ೭ ೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ ಎಂದು ಹೇಳುತ್ತಿದ್ದಾರೆ. ಆ ಹಣದಿಂದ ಕಟ್ಟಡವನ್ನು ಬೇಗ ಕಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ತಾಲ್ಲೂಕು ಬೋರ್ಡ್‌ನವರು ೭ ೫ ಲಕ್ಷ ರೂಪಾಯಿಗಳ ಕಟ್ಟಡದ ಅಂದಾಜನ್ನು ತಯಾರುಮಾಡಿ ಕೈಬಿಟ್ಟು, ಕಟ್ಟಡದ ಎಲ್ಲಾ ಕೆಲಸವನ್ನು ನಮಗೆ ಬಿಟ್ಟಿದ್ದಾರೆ. ಸರ್ಕಾರ ಈ ಕಟ್ಟಡಕ್ಕೋಸ್ಕರ ಏಳೂವರೆ ಲಕ್ಷ ರೂಪಾಯಿಗಳನ್ನು ಇಟ್ಟಿಲ್ಲ. ಇಡೀ ಸಂಸ್ಥಾನಕ್ಕೆ ಕಟ್ಟಡಕ್ಕೋಸ್ಕರ ೧೧ ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದೇವೆ. ಅದರಲ್ಲಿ ಇವರಿಗೆ ಏಳೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸ್ವಲ್ಪ ಕಷ್ಟವಾಗುತ್ತದೆ. ಎಲ್ಲಿ ಬಡತನವಿದೆ, ಯಾರು ಕೊಡುವುದಕ್ಕೆ ಆಗುವುದಿಲ್ಲ, ಅಂತಹವರನ್ನು ನಾವು ವಂತಿಗೆ ಕೊಡಿ ಎಂದು ಕೇಳುತ್ತಿಲ್ಲ. ಅರಸೀಕೆರೆಯವರು ಮನಸ್ಸು ಮಾಡಿ ಅರ್ಧದಷ್ಟು ಹಣ ಕೊಟ್ಟರೆ ಸರ್ಕಾರ ಕೂಡ ಹಣ ಒದಗಿಸಲಾಗುತ್ತದೆ.

ಗೋಬರ್ ಗ್ಯಾಸ್ ಸೂಪ್ಪರ್‌ವೈಸರ ಬಗ್ಗೆ

೨೨೭. ಶ್ರೀ ಗೋಪಾಲ ಮಂಕುಂದ ಕಾನಡೆ (ಶಿರಸಿ).—ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಕರ್ನಾಟಕ ರಾಜ್ಯಾದ್ಯಂತ ಗೋಬರ್ ಅನಿಲ ಯಂತ್ರ ಮೇಲ್ವಿಚಾರಕರ ಸಂಖ್ಯೆ ಎಷ್ಟು ?

(ಆ) ಅವರನ್ನು ಸರ್ಕಾರಿ ನೌಕರರೆಂದು ಸರ್ಕಾರ ಪರಿಗಣಿಸಿದೆಯೇ ?

(ಇ) ಪರಿಗಣಿಸಿದ್ದರೆ ಸರಿಯಾದ ವೇತನ ಶ್ರೇಣಿ, ಸೇವಾ ಭದ್ರತೆಯನ್ನು ಸರ್ಕಾರದವರು ಒದಗಿಸಿದ್ದಾರೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಮಂತ್ರಿಗಳು).—

(ಅ) ೧೨೩.

(ಆ) ಇಲ್ಲ.

(ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಗೋಪಾಲ ಮಂಕುಂದ ಕಾನಡೆ.—ಗೋಬರ್ ಅನಿಲ ಯಂತ್ರಗಳ ಮೇಲ್ವಿಚಾರಕರು ೬ ವರ್ಷ ಸರ್ವೀಸ್ ಮಾಡಿದ್ದಾರೆ. ಅವರನ್ನು ಈಗ ಮನೆಗೆ ಕಳುಹಿಸಿದರೆ ಅವರು ಏನು ಮಾಡಬೇಕು? ಅವರ ಗತಿಯೇನು?

ಶ್ರೀ ಅಬ್ದುಲ್ ನಜೀರ್‌ಸಾಬ್.—ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯವರು ಯಾವ ನಿಯಮವನ್ನು ಅನುಸರಿಸಿ ಅವರನ್ನು ನೇಮಕ ಮಾಡಿಕೊಂಡಿದ್ದರೋ ಅದರ ಪ್ರಕಾರ ಸರ್ಕಾರ ಅವರ ಸೇವೆಯನ್ನು ಮುಂದುವರಿಸುತ್ತಿದೆ. ಅವರನ್ನು ಸರ್ಕಾರಿ ನೌಕರರೆಂದು ಸರ್ಕಾರ ಪರಿಗಣಿಸಿದೆಯೇ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ ಅದಕ್ಕೆ 'ಇಲ್ಲ' ಎಂದು ಉತ್ತರ ಕೊಡಲಾಗಿದೆ.

ಶ್ರೀ ಗೋಪಾಲ ಮಂಕುಂದ ಕಾನಡೆ.—ಸರ್ಕಾರದವರನ್ನು ಕೇಳಿದರೆ ಖಾದಿ ಮಂಡಳಿಯವರನ್ನು ಕೇಳಿ ಎಂದು ಹೇಳುತ್ತಾರೆ, ಖಾದಿ ಮಂಡಳಿಯವರನ್ನು ಕೇಳಿದರೆ ಸರ್ಕಾರದವರನ್ನು ಕೇಳಿ ಎಂದು ಹೇಳುತ್ತಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಯಾರು ಯಾರನ್ನೋ ಕೇಳಿ ಎಂದು ಹೇಳಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಕೆಲವು ನಿಯಮಾವಳಿಗಳ ಪ್ರಕಾರ ಮಾಡಬೇಕಾಗುತ್ತದೆ. ಅವರನ್ನು ನೇಮಕ ಮಾಡಿಕೊಳ್ಳುವಾಗ ಯಾವುದೇ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿರಲಿಲ್ಲ. ಅವರನ್ನು ತಿಂಗಳಿಗೆ ೩೫೦ ರೂಪಾಯಿ ಸಂಬಳದ ಮೇಲೆ ನೇಮಕ ಮಾಡಿಕೊಂಡಿದ್ದಾರೆ. ಈಗ ಅದೇ ಸಂಬಳದ ಮೇಲೆ ಕೆಲಸ ಮಾಡುತ್ತಿದ್ದಾರೆ ೫೦ ರೂಪಾಯಿ ಹೆಚ್ಚಿಗೆ ಕೊಡಬೇಕೆಂದು ತೀರ್ಮಾನ ಮಾಡಲಾಗುತ್ತಿದೆ. ಗೋಬರ್ ಅನಿಲ ಯಂತ್ರ ಮೇಲ್ವಿಚಾರಕರ ಬಗ್ಗೆ ಸರ್ಕಾರ ಕಾನೂನಿನ ಚೌಕಟ್ಟಿನೊಳಗೆ ತೀವ್ರ ರೀತಿಯಲ್ಲಿ ಪರಿಶೀಲನೆ ಮಾಡಲಾಗುತ್ತದೆ.